Rotary
ರೋಟರಿ ಐಸಿರಿ ಪರ್ಕಳ
ವಲಯ-4, ರೋ. ಜಿಲ್ಲೆ-3182
ನಮ್ಮ ನಡೆ... ಕೃಷಿಯ ಕಡೆ...
UNITE FOR GOOD

ರೊ. ರಾಜೇಶ್ ಡಿ. ಶೆಣೈ ಸಂಪಾದಕತ್ವದ
# ಐಶ್ವರ್ಯ
ಸಂಪುಟ: 4 ಸಾಪ್ತಾಹಿಕ ಸಂಚಿಕೆ : 44
ದಿನಾಂಕ: 05.05.2026



Rtn. Francesco Arezzo
R.I. President



Rtn. K. Palaksha
District Governor



Rtn. Anil Kumar
President



Rtn. Krishnappa
Secretary

# Monthly Message



**Francesco Arezzo**
Rotary International President 2025–26

May 2026

Shoki Wafula did not know what to expect when he was forced to leave his birth country of Uganda for South Africa.

What he found was a Rotary community that welcomed him with warmth and friendship. That experience inspired him to help create a Rotaract e-club where young leaders from around the world could connect, develop their skills, and serve together.

Today, that community includes members across multiple continents who collaborate on leadership development, peacebuilding, and service initiatives. For Wafula, the experience reinforced the lesson that meaningful service begins with people who feel connected, valued, and empowered to lead.

His story reminds us why Youth Service Month is so important. Through Rotaract and programs like Rotary Youth Exchange, young people build leadership skills, develop global understanding, and discover the impact they can make through service.

Rotary’s Action Plan calls on us to enhance participant engagement. At its heart, that goal asks a simple question: How can we ensure that participation in Rotary is meaningful and fulfilling for everyone? Youth programs and Rotaract provide a powerful answer.

When clubs mentor Rotaractors, host exchange students, or support youth leadership initiatives, they create opportunities for members to share their experience in ways that feel personal and rewarding. These connections deepen members’ sense of purpose and strengthen the bonds within our Rotary family.

They also create lasting pathways into Rotary. Thousands of young people complete Rotary programs each year, and they carry those experiences with them throughout their lives. Many remain eager to stay connected.

Organizations such as Rotex International, an association of former Youth Exchange students, help Rotary program alumni continue serving as mentors, leaders, and advocates for our youth programs. As Rotex co-founder Hans Lee wrote in a recent reflection on Youth Exchange alumni, “exchange doesn’t end when you return home.”

When we welcome these young leaders into our clubs and activities, we strengthen the continuity of Rotary across generations.

During Youth Service Month, I hope every Rotary club reflects on how youth programs can enhance engagement for new and longtime members. Collaborate on service projects and invite youth voices into

Your planning and decision making.

Rotary's message to the world is that we can Unite for Good. Youth programs show us how that happens in practice — when generations come together, share ideas, and work side by side in service.

When we invest in young people, we are not only shaping future leaders. We are building a stronger, more connected Rotary today.

*Special Thanks to:*



Past Assistant Governor
**Rtn. MPHF. Manjunatha Upadhya M.**
Chairman – Rotary Peace Sub Committee, Rotary District 3182
&
Director, International Services Rotary Aisiri
*For sharing this article.*




ಜ್ಞಾನವಲ್ಲರಿ – District Assembly 2026: ಈ ಕಾರ್ಯಕ್ರಮಕ್ಕೆ ರೋಟರಿ ಐಸಿರಿಯಿಂದ ಈಗಾಗಲೇ ಹತ್ತು ಸದಸ್ಯರು ನೋಂದಾವಣೆ ಮಾಡಿದ್ದು, ರೂ.2,000/– ನೋಂದಾವಣೆ ಶುಲ್ಕವು ಮೇ 8ನೇ ತಾರೀಖಿನ ತನಕ ಜಾರಿಯಲ್ಲಿರುತ್ತದೆ ಎಂದು ಸಂಘಟಕರು ತಿಳಿಸಿದ್ದಾರೆ.






ಉಡುಪಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು – ಉಡುಪಿ ತಾಲೂಕು ಘಟಕವು ಆಯೋಜಿಸಿದ ಕನ್ನಡ ಸಾಹಿತ್ಯ ಸಮ್ಮೇಳನ "ಭೀಷ್ಮೋತ್ಸವ", ಕನ್ನಡ ಸಾಹಿತ್ಯ ಸಂಸ್ಕೃತಿಯ ಹರಿಕಾರರಾಗಿ, ಕನ್ನಡ ನಾಡು–ನುಡಿಯ ಆರಾಧಕರಾಗಿ, ಸಾಹಿತ್ಯ ಲೋಕಕ್ಕೆ ಸಲ್ಲಿಸಿದ ಅನನ್ಯ – ಅಮೂಲ್ಯ – ಅನುಕರಣೀಯ ಸೇವೆಗಾಗಿ ರೋಟರಿ ಐಸಿರಿಯ ನಿಯೋಜಿತ ಅಧ್ಯಕ್ಷ ರೊ. ಸಂದೀಪ್ ಕುಮಾರ್ ಅವರಿಗೆ ಸಂಘಟಕರು ಅಭಿನಂದನೆ ಸಲ್ಲಿಸಿದ್ದಾರೆ.

## ಬೌದ್ಧಿಕ ಸಿರಿ *"ಪ್ರತಿಫಲದ ನಿಯಮ."*

ಮಾನವನ ಬದುಕಿನಲ್ಲಿ ಸಂಬಂಧಗಳು, ನಂಬಿಕೆ, ಗೌರವ ಇವೆಲ್ಲವೂ ಅತ್ಯಂತ ಮುಖ್ಯವಾದ ಅಂಶಗಳು. ಆದರೆ ಇವುಗಳು ಒಂದೇ ದಿನದಲ್ಲಿ ಹುಟ್ಟುವುದಿಲ್ಲ; ನಮ್ಮ ವರ್ತನೆ, ನಮ್ಮ ಮಾತು, ಮತ್ತು ನಮ್ಮ ನಡೆ–ನುಡಿಗಳ ಮೂಲಕ ಅವು ನಿಧಾನವಾಗಿ ನಿರ್ಮಾಣವಾಗುತ್ತವೆ. ಈ ಹಿನ್ನೆಲೆಯಲ್ಲೇ "ನೀನು ಇತರರಿಂದ ನಿರೀಕ್ಷಿಸುವುದನ್ನೇ ನೀನೇ ಮೊದಲು ಮಾಡು" ಎಂಬ ಮಾತು ಅತ್ಯಂತ ಆಳವಾದ ಅರ್ಥವನ್ನು ಹೊತ್ತುಕೊಂಡಿದೆ.

ನಾವು ಸಾಮಾನ್ಯವಾಗಿ ಇತರರು ನಮ್ಮನ್ನು ಗೌರವಿಸಬೇಕು, ನಮ್ಮನ್ನು ಅರ್ಥಮಾಡಿಕೊಳ್ಳಬೇಕು, ನಮ್ಮನ್ನು ಸಹಾಯ ಮಾಡಬೇಕು ಎಂದು ನಿರೀಕ್ಷಿಸುತ್ತೇವೆ. ಆದರೆ ನಾವು ಸ್ವತಃ ಅದನ್ನೇ ಇತರರಿಗಾಗಿ ಮಾಡುತ್ತೇವೆಯೇ ಎಂಬ ಪ್ರಶ್ನೆಯನ್ನು ನಾವು ಕೇಳಿಕೊಳ್ಳುವುದಿಲ್ಲ. ಇದೇ ನಮ್ಮ ತಪ್ಪಿನ ಆರಂಭ.

ಉದಾಹರಣೆಗೆ, ನೀವು ಕಚೇರಿಯಲ್ಲಿ ನಿಮ್ಮ ಸಹೋದ್ಯೋಗಿಗಳು ನಿಮ್ಮೊಂದಿಗೆ ಸೌಹಾರ್ದದಿಂದ ವರ್ತಿಸಬೇಕು ಎಂದು ಬಯಸುತ್ತೀರಾ? ಹಾಗಿದ್ದರೆ ನೀವು ಮೊದಲು ಅವರೊಂದಿಗೆ ಸ್ನೇಹಪೂರ್ಣವಾಗಿ ವರ್ತಿಸಬೇಕು.

ನೀವು ಮನೆಯಲ್ಲಿಯೂ ನಿಮ್ಮ ಮಾತು ಕೇಳಿಸಿಕೊಳ್ಳಬೇಕು ಎಂದುಕೊಂಡರೆ, ಮೊದಲು ನೀವು ಇತರರ ಮಾತನ್ನು ಗಮನದಿಂದ ಕೇಳುವ ಗುಣವನ್ನು ಬೆಳೆಸಬೇಕು. ಇವು ಸಣ್ಣ ವಿಷಯಗಳಂತೆ ಕಾಣಬಹುದು, ಆದರೆ ಜೀವನದ ಗುಣಮಟ್ಟವನ್ನು ನಿರ್ಧರಿಸುವ ಮಹತ್ವದ ಅಂಶಗಳು.

ಈ ತತ್ತ್ವವನ್ನು ನಾವು ದಿನನಿತ್ಯದ ಬದುಕಿನಲ್ಲಿ ಅಳವಡಿಸಿಕೊಂಡರೆ, ನಮ್ಮ ಸುತ್ತಲಿನ ವಾತಾವರಣವೇ ಬದಲಾಗುತ್ತದೆ. ನೀವು ನಗುಮುಖದಿಂದ ಮಾತನಾಡಿದರೆ, ಎದುರಾಳಿ ಸಹ ನಗುತ್ತಾನೆ. ನೀವು ಸಹಾಯ ಮಾಡಿದರೆ, ಅವಶ್ಯಕತೆ ಬಂದಾಗ ಯಾರಾದರೂ ನಿಮಗೆ ಸಹಾಯ ಮಾಡಲು ಮುಂದೆ ಬರುತ್ತಾರೆ. ಇದು ಜೀವನದ ಸರಳ ಆದರೆ ಶಕ್ತಿಯುತ ಸತ್ಯ.

ಇದರ ಹಿಂದೆ ಇರುವ ತತ್ವವೇ "ಪ್ರತಿಫಲದ ನಿಯಮ" (Law of Reciprocity). ನಾವು ಏನು ನೀಡುತ್ತೇವೋ ಅದೇ ರೂಪದಲ್ಲಿ ಅದು ನಮಗೆ ಮರಳಿ ಬರುತ್ತದೆ. ಆದ್ದರಿಂದ, ನಾವು ಒಳ್ಳೆಯದನ್ನು ಬಯಸಿದರೆ, ನಾವು ಒಳ್ಳೆಯದನ್ನೇ ಮಾಡುವುದನ್ನು ಆರಂಭಿಸಬೇಕು.

ಆದರೆ ಇದು ಯಾವಾಗಲೂ ಸುಲಭವಲ್ಲ. ಕೆಲವೊಮ್ಮೆ ನಾವು ಒಳ್ಳೆಯದನ್ನು ಮಾಡಿದರೂ ಪ್ರತಿಯಾಗಿ ಏನೂ ಸಿಗದಿರಬಹುದು.

ಕೆಲವರು ನಮ್ಮ ಸದ್ಭಾವನೆಯನ್ನು ದುರುಪಯೋಗ ಪಡಿಸಿಕೊಳ್ಳಬಹುದು. ಇಂತಹ ಸಂದರ್ಭಗಳಲ್ಲಿ ಮನಸ್ಸು ಕುಗ್ಗುವುದು ಸಹಜ. ಆದರೆ ನಾವು ನಮ್ಮ ಮೌಲ್ಯಗಳನ್ನು ಬದಲಾಯಿಸಬಾರದು. ನಮ್ಮ ಒಳ್ಳೆಯತನವೇ ನಮ್ಮ ಬಲ.

ಸಮಾಜದಲ್ಲಿ ನಿಜವಾದ ಬದಲಾವಣೆ ಬಯಸಿದರೆ, ಅದು ನಮ್ಮಿಂದಲೇ ಆರಂಭವಾಗಬೇಕು.

ನಾವು ಪ್ರಾಮಾಣಿಕತೆಯನ್ನು ಬಯಸಿದರೆ, ನಾವು ಪ್ರಾಮಾಣಿಕರಾಗಬೇಕು. ನಾವು ಶಾಂತಿಯನ್ನು ಬಯಸಿದರೆ, ನಾವು ಶಾಂತಿಯ ದಾರಿಯಲ್ಲಿ ನಡೆಯಬೇಕು. ಈ ರೀತಿಯ ಚಿಕ್ಕ ಚಿಕ್ಕ ಬದಲಾವಣೆಗಳು ದೊಡ್ಡ ಪರಿವರ್ತನೆಗೆ ಕಾರಣವಾಗುತ್ತವೆ.

ಕೊನೆಯಲ್ಲಿ, "ನೀನು ಇತರರಿಂದ ನಿರೀಕ್ಷಿಸುವುದನ್ನೇ ನೀನೇ ಮೊದಲು ಮಾಡು" ಎಂಬುದು ಕೇವಲ ಒಂದು ಮಾತಲ್ಲ; ಅದು ಬದುಕಿನ ಮಾರ್ಗದರ್ಶಕ ತತ್ವ.

ನಾವು ಇದನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಂಡರೆ, ನಮ್ಮ ವ್ಯಕ್ತಿತ್ವವೂ ಉನ್ನತವಾಗುತ್ತದೆ, ನಮ್ಮ ಸಂಬಂಧಗಳೂ ಗಾಢವಾಗುತ್ತವೆ, ಮತ್ತು ನಮ್ಮ ಜೀವನವೂ ಸಂತೋಷಕರವಾಗುತ್ತದೆ.

ಆದ್ದರಿಂದ, ಬದಲಾವಣೆ ಇತರರಿಂದ ಅಲ್ಲ... ನಮ್ಮಿಂದಲೇ ಆರಂಭವಾಗಲಿ.

**ಸಂಕಲನ : ರೊ. ರಾಜೇಶ್ ಡಿ. ಶೆಣೈ**

### Photos of 28/04/2026













## ಕಾರ್ಯದರ್ಶಿಯವರ ವರದಿ



ರೋಟರಿ ಐಸಿರಿಯ 40ನೇ ವಾರದ ಸಭೆ 28/4/2026ರಂದು RCC ಕಾರ್ಯಾಲಯದಲ್ಲಿ ನಡೆಯಿತು.

ದಂಡಾಪಾಣಿ ರೊ. ಕೊರಗಪ್ಪ ಶೆಟ್ಟಿಗಾರ್ ಅವರು ಕೊರಳ ಲಾಂಛನ ತೊಡಿಸಿ ಅಧ್ಯಕ್ಷರು ಸಭೆಯನ್ನು ಆರಂಭಿಸಿದರು.

ರೊ. ಎ. ಗಣೇಶ್ ಅವರು ಪ್ರಾರ್ಥನೆ ನಡೆಸಿದರು. ಅಧ್ಯಕ್ಷರಾದ ರೊ. ಅನಿಲ್ ಕುಮಾರ್ ಎಲ್ಲರನ್ನೂ ಸ್ವಾಗತಿಸಿದರು. ಕಾರ್ಯದರ್ಶಿ ರೊ. ಕೃಷ್ಣಪ್ಪ ಅವರು ವಾರದ ವರದಿಯನ್ನು ಮಂಡಿಸಿದರು.

ವಾರದ ಬುಲೆಟಿನ್ ಐಶ್ವರ್ಯವನ್ನು ರೊ. ಅಶೋಕ್ ನಾಯಕ್ ಅವರು ಬಿಡುಗಡೆಗೊಳಿಸಿದರು. ಸಂಪಾದಕರಾದ ರೊ. ರಾಜೇಶ್ ಡಿ ಶೆಣೈ ಅವರು ಸಹಕರಿಸಿದರು.

ರೊ. ಅಶೋಕ್ ನಾಯಕ್ ಅವರು ರೊ. ರಾಜೇಶ್ ಡಿ ಶೆಣೈ ಅವರ ಪರಿಶ್ರಮ ಮತ್ತು ತಾಳ್ಮೆಯನ್ನು ಕೊಂಡಾಡಿದರು.ಅಂತೆಯೇ ಉತ್ತಮ ಲೇಖನಗಳು ಪ್ರಕಟವಾಗುತ್ತಿವೆ ಎಂದು ಪ್ರಶಂಸಿಸಿದರು.

ರೊ. ರಾಜೇಶ್ ಡಿ ಶೆಣೈ ಅವರು ಹಲವಾರು ಪ್ರೇರಣದಾಯಕ ಕತೆಗಳನ್ನು ಐಶ್ವರ್ಯದಲ್ಲಿ ಪ್ರಕಟಿಸಿರುವುದನ್ನು ತಿಳಿಸಿದರು. ಒಂದು ಸಂಸ್ಥೆಯ ಉತ್ತಮ ಬೆಳವಣಿಗೆಗೆ ತರಬೇತಿ ಎಷ್ಟು ಅಗತ್ಯ ಎಂದು ವಿವರಿಸಿದರು.

ರೊ. ಗುರುಪ್ರಸಾದ್ ಕಾಮತ್ ಅವರು ತಮ್ಮ ರೋಟರಿ ಅನುಭವದ ತೃಪ್ತಿಯನ್ನು ವ್ಯಕ್ತಪಡಿಸುತ್ತಾ ನಿಜವಾದ ರೋಟರಿಯನ್ ಆದವನು ಎಂದಿಗೂ ರೋಟರಿ ಬಿಡುವುದಿಲ್ಲ ಎಂದರು. ರೋಟರಿ ನೀಡಿರುವ ಒಡನಾಟ ಬೇರೆ ಎಲ್ಲೂ ಸಿಗದು ಎಂದರು.

ರೊ. ಸ್ಮಿತಾ ಜಿ. ಕಾಮತ್ ಅವರು ಹಲವು ರೀತಿಯ ಖರ್ಚಿಲ್ಲದೆ ನಡೆಯುವ ಕಾರ್ಯಕ್ರಮಗಳ ಬಗ್ಗೆ ಸಲಹೆ ನೀಡಿದರು. Retention ಒತ್ತಾಯಪೂರ್ವಕ ಆಗಬಾರದು, ಖುಷಿಯಿಂದ ಉಳಿದುಕೊಂಡವರು ಮಾತ್ರ ಕೆಲಸ ಮಾಡುತ್ತಾರೆ ಎಂದರು.

ರೊ. ಎ. ಗಣೇಶ್ ಅವರು ರೋಟರಿ ಕ್ಲಬ್ ಎನ್ನುವುದು ಕೂಡುಕುಟುಂಬ. ಎಲ್ಲರೂ ಹೊಂದಿಕೊಂಡು ಬಾಳಬೇಕು ಮತ್ತು ಒಬ್ಬರಿಗೊಬ್ಬರು ಸಹಕರಿಸಬೇಕು ಎಂದರು.

ನಮ್ಮ ಜೀವನ ಕ್ರಮ ಶಿಸ್ತುಬದ್ಧವಾಗಿದರೆ ರೋಟರಿಯೂ ಶಿಸ್ತುಬದ್ಧವಾಗಿ ನಡೆಯುತ್ತದೆ ಎಂದರು.

ರೊ. ಕೊರಗಪ್ಪ ಶೆಟ್ಟಿಗಾರ್ ಅವರು ಹಿರಿಯ ರೋಟರಿಯನ್ ಗಳ ಮಾರ್ಗದರ್ಶನವನ್ನು ಅಳವಡಿಸಲು ಪ್ರಯತ್ನಿಸುತ್ತೇವೆ ಎಂದು ಆಶ್ವಾಸನೆ ನೀಡಿದರು.

## "ಐಶ್ವರ್ಯ" 43ನೇ ಸಂಚಿಕೆ ಬಿಡುಗಡೆ



ರೊ. ರಾಜೇಶ್ ಡಿ. ಶೆಣೈ ಸಂಪಾದಕತ್ವದ ರೋಟರಿ ಐಸಿರಿಯ ಸಾಪ್ತಾಹಿಕ "ಐಶ್ವರ್ಯ"ದ ನಲ್ವತ್ತಮೂರನೇ ಇ-ಸಂಚಿಕೆಯನ್ನು, ರೊ. ಅಶೋಕ್ ನಾಯಕ್ ರವರು 28/04/26ರ ವಾರದ ಸಭೆಯಲ್ಲಿ ಬಿಡುಗಡೆಗೊಳಿಸಿದರು.

---

***ಕಾರ್ಯದರ್ಶಿಯವರ ವರದಿಯ ಮುಂದುವರೆದ ಭಾಗ....***

ರೊ. ಕೃಷ್ಣಪ್ಪ ಅವರು ಕ್ಲಬ್ ನ ಸದಸ್ಯರ ನಡುವೆ ಭಿನ್ನಾಭಿಪ್ರಾಯ ಇದ್ದರೆ ಹಿರಿಯ ಸದಸ್ಯರು ಅದನ್ನು ಬಗೆಹರಿಸಬೇಕು ಎಂದರು. ಒಂದು ತಿಂಗಳ ಒಳಗೆ ಅಧ್ಯಕ್ಷರು ಐಸಿರಿ ಟ್ರಸ್ಟ್ ಅನ್ನು ಸ್ಥಾಪಿಸಬೇಕೆಂದು ಬೇಡಿಕೆ ಇಟ್ಟರು.

ರೋಟರಿ ಸದಸ್ಯತನ ಎನ್ನುವುದೊಂದು ಹಕ್ಕು, ಹಾಗಾಗಿ ಪ್ರತಿ ಸದಸ್ಯರು ಕ್ಲಬ್ ನ ಕಾರ್ಯಚಟುವಟಿಕೆಗಳಲ್ಲಿ ಸ್ವಯಂಪ್ರೇರಿತರಾಗಿ ತೊಡಗಿಕೊಳ್ಳುವುದೇ ಸಹಜ. ಒತ್ತಾಯಪೂರ್ವಕವಾಗಿ ಯಾವುದೂ ನಡೆಯಬಾರದು ಎಂದರು. ಉತ್ತಮ ಸಾಮಾಜಿಕ ಗೌರವ ನೀಡುವ ಈ ಸಂಸ್ಥೆಯ ಸದಸ್ಯರಾಗಲು ಹೆಮ್ಮೆ ಎಂದರು. ಹಿರಿಯ ಸದಸ್ಯರು ರೋಟರಿ ಮಾಹಿತಿ ಗಳನ್ನು ಐಸಿರಿ ಗ್ರೂಪ್ ನಲ್ಲಿ ಪ್ರಕಟಿಸಬೇಕೆಂದು ಕೇಳಿಕೊಂಡರು.

ಅಧ್ಯಕ್ಷರಾದ ರೊ. ಅನಿಲ್ ಕುಮಾರ್ ಅವರು ಟ್ರಸ್ಟ್ ಸ್ಥಾಪಿಸುವ ಬಗ್ಗೆ ಒತ್ತು ಕೊಡುವುದಾಗಿ ತಿಳಿಸಿದರು. ಎಲ್ಲರ ಸಹಕಾರ ಕ್ಲಬ್ ಅನ್ನು ಮುನ್ನಡೆಸುತ್ತದೆ. ಅದಕ್ಕಾಗಿ ಒಮ್ಮೆ ಮಾಡಿದ ತಪ್ಪನ್ನು ಪದೇ ಪದೇ ಮಾಡದೆ ತಿದ್ದಿಕೊಳ್ಳಬೇಕು ಎಂದರು.

ಕಾರ್ಯದರ್ಶಿ ಧನ್ಯವಾದ ಸಮರ್ಪಿಸಿದರು.

ದಂಡಾಪಾಣಿ ಕೊರಳ ಲಾಂಛನ ತೆಗೆದು ಅಧ್ಯಕ್ಷರು ಸಭೆಯನ್ನು ಮುಂದೂಡಿದರು.

ರಾಷ್ಟ್ರ ಗೀತೆಯೊಂದಿಗೆ ಸಭೆ ಮುಕ್ತಾಯಗೊಂಡಿತು.